ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಉತ್ತರ ತರಿಸಿ ಈ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ರಾಜೀವ್‌ರವರೆ ತಾವು ಕೇಳಿ.

3. ವಿಷಯ: ಇಲಾಖೆಯ ಅಧಿಕಾರಿಗಳು ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಉದ್ಭವವಾಗುವ ಅನಧಿಕೃತ ಸರ್ಕಲ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದಿರುವ ಬಗ್ಗೆ.

ಶ್ರೀ ಪಿ. ರಾಜೀವ್ (ಕುಡಚಿ):– ಮಾನ್ಯ ಅಧ್ಯಕ್ಷರೆ, ರಾಜ್ಯ ಹೆದ್ದಾರಿಗಳ ಮೇಲೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಇದ್ದಕಿದ್ದ ಹಾಗೆ ರಾತ್ರೋರಾತ್ರಿ ಮಹಾನುಭಾವರುಗಳ ಹೆಸರಿನಲ್ಲಿ circle ಅನ್ನು ಕಟ್ಟಿಬಿಡುತ್ತಾರೆ. ಅಲ್ಲಿ ಇದರಿಂದಾಗಿ ಅಪಘಾತಗಳು ಹೆಚ್ಚಾಗುತ್ತಿದೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮವನ್ನು ಏತಕ್ಕಾಗಿ ತೆಗೆದುಕೊಳ್ಳುತ್ತಿಲ್ಲ.?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಇಲಾಖಾ ಸಚಿವರು):– ಮಾನ್ಯ ಅಧ್ಯಕ್ಷರೆ, ರಸ್ತೆಯ ಮಧ್ಯೆ ಅನಧಿಕೃತವಾಗಿ ಸ್ಥಾಪನೆ ಮಾಡತಕ್ಕಂತಹ ಸರ್ಕಲ್‌ಗಳನ್ನು ತೆರವುಗೊಳಿಸುವುದಕ್ಕೆ ಈಗಾಗಲೇ ನಮ್ಮ ಇಲಾಖೆಯಿಂದ ಕ್ರಮ ಕೈಗೊಂಡಿದ್ದೇವೆ. ನಿರ್ದಿಷ್ಟವಾಗಿ ಎಲ್ಲೆಲ್ಲಿ ಈ ರೀತಿಯಾಗಿ ಮಾಡಿದ್ದಾರೆಂಬ ಬಗ್ಗೆ ಮಾನ್ಯ ಸದಸ್ಯರು ವಿವರವನ್ನು ಒದಗಿಸಲಿ ಇಲ್ಲದಿದ್ದರೆ ಅವರು ಪ್ರಸ್ತಾಪಿಸಿರುವ ಪ್ರಶ್ನೆಗೆ ನಾನಾದರೂ ವಿವರಗಳನ್ನು ತರಿಸಿಕೊಂಡು, I will see that they are evicted.

ಅಧ್ಯಕ್ಷರು:– O.K. ಮಾನ್ಯ ಸಿ.ಟಿ.ರವಿಯವರೆ ಕೇಳಿ.

4. ವಿಷಯ: ಬಿ.ಬಿ.ಎಂ.ಪಿ.ಯಲ್ಲಿ ಅವ್ಯವಹಾರ ಆಗಿರುವ ಬಗ್ಗೆ

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಈ ಬಿಬಿಎಂಪಿಯಲ್ಲಿ 35 ಲಕ್ಷ ರೂಪಾಯಿಗಳಿಗೆ approval ತೆಗೆದುಕೊಂಡು 49 ಕೋಟಿ ರೂಪಾಯಿಗಳಿಗೆ ಮಂಜೂರಾತಿಯನ್ನು ಪಡೆದು ಬಿಲ್ ಮಾಡಿದ್ದಾರೆಂಬ ಬಗ್ಗೆ ನಿನ್ನೆ ದಿನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. 35 ಲಕ್ಷ